ನೀಗಿಸಲು ಮನೆ ಮನೆಗೆ ಭಿಕ್ಷೆ ಕೇಳುತ್ತಾ ಹೋದಳು. ಪ್ರತಿ ಮನೆಯ ಮುಂದೆ ನಿಂತು, 'ಅಮ್ಮಾ! ದಯವಿಟ್ಟು ಏನಾದರೂ ನೀಡಿ' ಎಂದಾಗ, 'ನಮಗೇ ತಿನ್ನಲು ಗತಿ ಇಲ್ಲ, ನಿನಗೆಲ್ಲಿಂದ ತರುವುದು. ಮುಂದೆ ಹೋಗಮ್ಮ' ಎನ್ನುವ ಉತ್ತರವೇ ಬಂತು.

ಊರೆಲ್ಲಾ ಸುತ್ತಿದರೂ ಕಣ್ಣಮ್ಮನಿಗೆ ಎಲ್ಲಿಯೂ ಏನೂ ಸಿಗಲಿಲ್ಲ. ಕೊನೆಗೆ ಸುಸ್ತಾಗಿ ಒಂದು ಮರದ ಕೆಳಗೆ ಕುಳಿತಳು. ಆಗ ಅವಳಿಗೆ ದೂರದಲ್ಲಿ ಅಜ್ಜಿಯೊಬ್ಬಳು ಇನ್ನೊಂದು ಮರದ ಕೆಳಗೆ ಒಲೆ ಹಚ್ಚಿ ರೊಟ್ಟಿ ಸುಡುತ್ತಿರುವುದು ಕಾಣಿಸಿತು. ಕಣ್ಣಮ್ಮ ಅಜ್ಜಿಯ ಬಳಿಗೆ ಬಂದು, 'ಅಮ್ಮಾ, ಹಸಿವೆಯಿಂದ ಬಳಲುತ್ತಿದ್ದೇನೆ, ನನಗೂ ರೊಟ್ಟಿ ಕೊಡುತ್ತೀಯಾ?' ಎಂದಳು. ಅಜ್ಜಿ ಅವಳನ್ನೊಮ್ಮೆ ನೋಡಿದಳು. ಅವಳಿಗೆ ಕಣ್ಣಮ್ಮನ ಸ್ಥಿತಿ ಕಂಡು ಮರುಕ ಹುಟ್ಟಿತು. 'ನಾನು ನಿನಗೆ ಒಂದೇ ರೊಟ್ಟಿ ಕೊಡಲು ಸಾಧ್ಯ. ಹೆಚ್ಚಿಗೆ ಕೇಳಬಾರದು' ಎಂದಳು ಅಜ್ಜಿ. ಕಣ್ಣಮ್ಮ ಸಂತೋಷದಿಂದ ತನಗೆ ಒಂದೇ ರೊಟ್ಟಿ ಸಾಕು ಎಂದಳು. ನಂತರ ಮನೆಯಲ್ಲಿರುವ ಅಮ್ಮನ ನೆನಪಾಯಿತು. 'ಅಜ್ಜಿ, ಒಂದು ವಾರದಿಂದ ನನ್ನಮ್ಮ ಸಹ ಏನೂ ತಿಂದಿಲ್ಲ, ಇನ್ನೊಂದು ರೊಟ್ಟಿ ಕೊಟ್ಟರೆ ನಿನಗೆ ಪುಣ್ಯ ಬರುತ್ತದೆ' ಎಂದಳು. ಅಜ್ಜಿಗೆ ಅವಳ ಮೇಲೆ ಮರುಕವಾಯಿತು. ತನ್ನಲ್ಲಿರುವ ಇನ್ನೊಂದು ರೊಟ್ಟಿಯನ್ನೂ ಅವಳಿಗೆ ಕೊಟ್ಟಳು. ಅಜ್ಜಿ ಕೊಟ್ಟ ರೊಟ್ಟಿಯೊಂದಿಗೆ ಕಣ್ಣಮ್ಮ ಮನೆಗೆ ಹಿಂದಿರುಗುತ್ತಿದ್ದಳು. ದಾರಿಯಲ್ಲಿ ಒಂದು ನಾಯಿ ಇವಳ ಕೈಯಲ್ಲಿರುವ ರೊಟ್ಟಿಯನ್ನು ಆಸೆಯಿಂದ ನೋಡಿತು. 'ಪಾಪ, ಈ ನಾಯಿಗೆ ನನ್ನಂತೆ ಮನೆ ಮನೆಗೆ ಹೋಗಿ ಕೇಳಲೂ ಬರುವುದಿಲ್ಲ' ಎಂದುಕೊಂಡು ನಾಯಿಗೆ ಒಂದು ರೊಟ್ಟಿ ಕೊಟ್ಟಳು.

ಮಗಳು ಮನೆಗೆ ಬರುವುದನ್ನೇ ಕಾಯುತ್ತಿದ್ದ ಕಮಲ, 'ತಿನ್ನಲು ಏನಾದರೂ ಸಿಕ್ಕಿತೆ?' ಎಂದು ಕೇಳಿದಳು. ಆಗ ಕಣ್ಣಮ್ಮ ನಡೆದದ್ದನ್ನೆಲ್ಲಾ ತಾಯಿಗೆ ತಿಳಿಸಿದಳು. ಅದಕ್ಕೆ ಕಮಲ, 'ನೀನು ನಾಯಿಗೆ ಒಂದು ರೊಟ್ಟಿ ಕೊಟ್ಟು ಒಳ್ಳೆಯ ಕೆಲಸ ಮಾಡಿದ್ದೀಯ ಮಗಳೇ. ಉಳಿದ ಒಂದೇ ರೊಟ್ಟಿಯನ್ನು ನಾವಿಬ್ಬರೂ ಹಂಚಿಕೊಂಡು ತಿನ್ನೋಣ' ಎಂದಳು. ಇನ್ನೇನು ಇಬ್ಬರೂ ರೊಟ್ಟಿ ತಿನ್ನಬೇಕು ಎನ್ನುವಾಗ ಬಾಗಿಲ ಬಳಿ, 'ಅಮ್ಮಾ, ಹಸಿವಿನಿಂದ ಸಾಯುತ್ತಿದ್ದೇನೆ. ತಿನ್ನಲು ಏನಾದರೂ ಇದ್ದರೆ ಕೊಡಿ ತಾಯಿ' ಎಂದು ಯಾರೋ ಹಸಿವಿನಿಂದ ಬೇಡುವುದು ಕೇಳಿಸಿತು. ಆಗ ಅವರಿಬ್ಬರೂ ಒಬ್ಬರ ಮುಖವನ್ನೊಬ್ಬರು ನೋಡಿಕೊಂಡರು.

'ಅಯ್ಯೋ ಪಾಪ, ಯಾರೋ ಹಸಿವಿನಿಂದ ನರಳುತ್ತಿದ್ದಾರೆ. ನನ್ನ ಭಾಗದ ರೊಟ್ಟಿಯನ್ನು ಅವರಿಗೆ ಕೊಟ್ಟು ಬಿಡು' ಎಂದಳು ಕಮಲ. ಅದಕ್ಕೆ ಕಣ್ಣಮ್ಮ, 'ಅರ್ಧ ರೊಟ್ಟಿಯಿಂದ ಅವನ ಹಸಿವು ಹೇಗೆ ಹೋಗುತ್ತದೆ. ನನ್ನ ಭಾಗದ ರೊಟ್ಟಿಯನ್ನೂ ಕೊಟ್ಟು ಬಿಡುತ್ತೇನೆ' ಎಂದು ಭಿಕ್ಷುಕನಿಗೆ ಪೂರ್ತಿ ರೊಟ್ಟಿ ಕೊಟ್ಟುಬಿಟ್ಟಳು. ರೊಟ್ಟಿ ತಿಂದು ಸಂತೃಪ್ತನಾದ ಭಿಕ್ಷುಕ, 'ಮಗಳೇ, ಭಗವಂತ ನಿನ್ನನ್ನು ಆಶೀರ್ವದಿಸಲಿ' ಎಂದು ಹೇಳಿ ಅಲ್ಲಿಂದ ಮುಂದೆ ಸಾಗಿದ. ಒಳಬರುತ್ತಿದ್ದಂತೆ ಕಮಲ ಹಸಿವಿನಿಂದ ಪ್ರಜ್ಞೆ ತಪ್ಪಿದ್ದಳು. ಅದನ್ನು ಕಂಡು ಕಣ್ಣಮ್ಮನೂ ಮೂರ್ಛೆ ಹೋದಳು. ಕಮಲಳ ಕನಸಿನಲ್ಲಿ ದೇವರು ಪ್ರತ್ಯಕ್ಷನಾಗಿ ಹೇಳಿದ:

'ನೀವಿಬ್ಬರೂ ಹಸಿವಿನಿಂದ ಬಳಲಿದ್ದರೂ, ನಿಮ್ಮ ಪಾಲಿನ ರೊಟ್ಟಿಯನ್ನು ನಾಯಿಗೂ ಮತ್ತು ಭಿಕ್ಷುಕನಿಗೂ ಕೊಟ್ಟಿರಿ. ಆ ನಾಯಿ ಮತ್ತು ಭಿಕ್ಷುಕನ ವೇಷದಲ್ಲಿ ಬಂದಿದ್ದು ನಾನೇ. ನಿಮ್ಮ ನಿಸ್ವಾರ್ಥ ಪ್ರೀತಿಗೆ ಸೋತಿದ್ದೇನೆ. ಇನ್ನು ಚಿಂತಿಸಬೇಡಿ. ನಿಮಗೆ ಜೀವನಕ್ಕೆ ಬೇಕಾಗುವಷ್ಟು ಧನ–ಧಾನ್ಯ ದೊರೆಯುತ್ತದೆ. ಸುಖವಾಗಿರಿ' ಎಂದನು.

ಅವರಿಗೆ ಎಚ್ಚರವಾದಾಗ ಗುಡಿಸಲು ಅರಮನೆಯಾಗಿ ಬದಲಾಗಿತ್ತು. ಮನೆ ತುಂಬಾ ದವಸ–ಧಾನ್ಯ–ಧನ ತುಂಬಿತ್ತು. ಆ ಗ್ರಾಮದ ಜನರನ್ನು ಮನೆಗೆ ಕರೆದು ಹೊಟ್ಟೆ ತುಂಬಾ ಊಟ ಹಾಕಿ, ಧಾನ್ಯ, ಬಟ್ಟೆಗಳನ್ನು ದಾನವಾಗಿ ಕೊಟ್ಟರು. ಆ ಗ್ರಾಮದಲ್ಲಿ ಮಳೆಯೂ ಸುರಿಯಹತ್ತಿತು.